# ಶ್ರೀರಾಮಕೃಷ್ಣ ಪ್ರಣಾಮ ಮಂತ್ರ

## ಸ್ವಾಮಿ ಭಜನಾನಂದ

**ಶ್ರೀರಾಮಕೃಷ್ಣ ಭಕ್ತಸಮುದಾಯದಲ್ಲಿ ಈ ಕೆಳಗಿನ ಪ್ರಣಾಮಮಂತ್ರ ಅತ್ಯಂತ ಪ್ರಸಿದ್ಧವಾದುದು. ಮೇಲುನೋಟಕ್ಕೆ ಅತ್ಯಂತ ಸರಳವಾಗಿ ಕಂಡುಬರುವ ಈ ಮಂತ್ರದ ವಿಶೇಷಾರ್ಥದ ಒಂದು ಒಳನೋಟವನ್ನು ನೀಡಿರುವ ಸ್ವಾಮಿ ಭಜನಾನಂದಜಿಯವರು ರಾಮಕೃಷ್ಣ ಮಹಾಸಂಘದ ಸಹಾಯಕ ಕಾರ್ಯದರ್ಶಿಗಳಾಗಿರುವರು. ಇವರು ೧೯೭೯ರಿಂದ ೮೬ರವರೆಗೆ ರಾಮಕೃಷ್ಣ ಮಹಾಸಂಘದ ಆಂಗ್ಲಪತ್ರಿಕೆ 'ಪ್ರಬುದ್ಧ ಭಾರತ'ದ ಸಂಪಾದಕರಾಗಿದ್ದರು. ಇವರ ಬರಹಗಳು ಆಧ್ಯಾತ್ಮಿಕ ಸಾಧಕರಿಗೆ ಒಂದು ಅಪೂರ್ವ ಆಸ್ತಿಯಂತಿವೆ. ಮೂಲ ಆಂಗ್ಲ ಭಾಷೆಯಲ್ಲಿರುವ ಈ ಲೇಖನದ ಅನುವಾದ ಸಂಪಾದಕರದು.**

ಓಂ ಸ್ಥಾಪಕಾಯ ಚ ಧರ್ಮಸ್ಯ ಸರ್ವ-ಧರ್ಮ-ಸ್ವರೂಪಿಣೇ |
ಅವತಾರ-ವರಿಷ್ಠಾಯ ರಾಮಕೃಷ್ಣಾಯ ತೇ ನಮಃ ||

ಸ್ವಾಮಿ ವಿವೇಕಾನಂದರು ೧೮೯೮ರ ಮಾಘಪೂರ್ಣಿಮೆಯಂದು ಶ್ರೀರಾಮಕೃಷ್ಣರ ನಿಷ್ಠಾವಂತ ಭಕ್ತನಾದ ನವಗೋಪಾಲ ಘೋಷನ ಮನೆಗೆ ಶ್ರೀರಾಮಕೃಷ್ಣರ ಮೂರ್ತಿಯನ್ನು ಅಲ್ಲಿ ಪ್ರತಿಷ್ಠಾಪಿಸಲು ಹೋಗಿದ್ದರು. ಪ್ರತಿಷ್ಠಾಪನೆಯ ನಂತರ ಅವರು ಧ್ಯಾನಕ್ಕೆ ಕುಳಿತಿದ್ದಾಗ ಈ ಮೇಲಿನ ಮಂತ್ರವು ಸ್ವಯಂಪ್ರೇರಣೆಯಿಂದ ಅವರ ಮನಸ್ಸಿನಲ್ಲಿ ಮೂಡಿಬಂತು. ಒಂದು ಅತೀಂದ್ರಿಯ ಅನುಭವವನ್ನು ಸಂಕ್ಷೇಪವಾಗಿ ಶಬ್ದದ ಮೂಲಕ ವ್ಯಕ್ತಪಡಿಸುವುದು ಮಂತ್ರ. ಈ ಪ್ರಣಾಮ ಮಂತ್ರವು ಸ್ವಾಮೀಜಿಯವರು ಕಂಡ ಶ್ರೀರಾಮಕೃಷ್ಣರ ಲೋಕಹಿತ ಕಾರ್ಯವೆಂಬ ಪರಮೋದ್ದೇಶದ ಪೂರ್ಣ ದರ್ಶನವನ್ನು ವ್ಯಕ್ತಪಡಿಸುತ್ತದೆ. ಈ ಮಹಾಮಂತ್ರದ ಗರ್ಭದಲ್ಲಿ ಅನೇಕ ಉದಾತ್ತ ಭಾವನೆಗಳು, ಸತ್ಯಗಳು ಅಡಗಿಕೊಂಡಿವೆ. ಆಳ ಚಿಂತನೆಯ ಮೂಲಕ ಅವುಗಳಲ್ಲಿ ಕೆಲವನ್ನು ನಾವು ಅರ್ಥಮಾಡಿಕೊಳ್ಳಲು ಸಾಧ್ಯ.

### ಸ್ಥಾಪಕಾಯ ಚ ಧರ್ಮಸ್ಯ

ಈ ವಾಕ್ಯಾಂಗವು ಶ್ರೀರಾಮಕೃಷ್ಣರು ಧರ್ಮಸಂಸ್ಥಾಪಕರೆಂದು ವಿವರಿಸುತ್ತದೆ. ನಮ್ಮ ಶಾಸ್ತ್ರಗಳಲ್ಲಿ ಧರ್ಮದ ಮೂರು ಮುಖ್ಯ ನಿರ್ವಚನಗಳಿವೆ. ಅವುಗಳಲ್ಲಿ ಒಂದು ಇಲ್ಲಿ ನಮ್ಮ ಪ್ರಸ್ತುತ ವಿಷಯಕ್ಕೆ ಸಂಗತವಾಗಿದೆ. ಅದು ಕಣಾದನು ನೀಡಿರುವ ನಿರ್ವಚನ: 'ಯಾವುದರಿಂದ ಜಗತ್ತಿನ ಹಿತ ಮತ್ತು ವೈಯಕ್ತಿಕ ಮುಕ್ತಿ ಸಾಧಿಸಲ್ಪಡುವುದೊ ಅದು ಧರ್ಮ' (ಯತೋ ಅಭ್ಯುದಯ-ನಿಃಶ್ರೇಯಸಸಿದ್ಧಿಃ ಸ ಧರ್ಮಃ|). ಯಾವುದು ಜಗತ್ತಿನ ಹಿತವನ್ನು ಸಾಧಿಸುವುದೊ ಮತ್ತು ಜನರನ್ನು ಅಜ್ಞಾನದ ಬಂಧನದಿಂದ ಮುಕ್ತರಾಗುವಂತೆ ಮಾಡುವುದೊ ಅದು ನಿಜವಾದ ಧರ್ಮ.

ಇವುಗಳಲ್ಲಿ ಯಾವುದೇ ಒಂದು ಆದರ್ಶವನ್ನು ಪೂರ್ತಿಗೊಳಿಸುವುದರಲ್ಲಿ ಧರ್ಮ ಅಸಮರ್ಥವಾದರೂ ಗೀತೆಯಲ್ಲಿ ಹೇಳಿರುವ ಧರ್ಮಗ್ಲಾನಿ ಉಂಟಾಗುತ್ತದೆ. ಗೀತೆಯ ಪ್ರಕಾರ, ಆಗ ಧರ್ಮವನ್ನು ಪುನಃ ಸ್ಥಾಪಿಸಲು ಭಗವಂತನು ಅವತರಿಸುತ್ತಾನೆ. ಅವತಾರ ಪುರುಷನು ಹೇಗೆ ಧರ್ಮವನ್ನು ಪುನಃಸ್ಥಾಪಿಸುತ್ತಾನೆ? ಮುಖ್ಯವಾಗಿ ಮೂರು ರೀತಿಗಳಲ್ಲಿ. ತನ್ನ ಆಂತರಿಕ ದಿವ್ಯಶಕ್ತಿಯ ಮೂಲಕ, ಸನಾತನ ಆದರ್ಶ ಮತ್ತು ಸಂಪ್ರದಾಯಗಳಿಗೆ ಪುನಃ ಜೀವಕಳೆ ತುಂಬುವುದರ ಮೂಲಕ, ಮತ್ತು ಹೊಸ ಆದರ್ಶಗಳು ಮತ್ತು ಮಾರ್ಗಗಳನ್ನು ಕಂಡುಹಿಡಿಯುವುದರ ಮೂಲಕ.

**ದಿವ್ಯಯೋಗ** · ಅವತಾರ ಪುರುಷರು ಭಗವಂತನ ಒಂದು ವಿಶೇಷ ಆವಿರ್ಭಾವ. ಆದ್ದರಿಂದ ಅವರಲ್ಲಿ ಅಸಾಧಾರಣವಾದ ನೈತಿಕ ಮತ್ತು ಆಧ್ಯಾತ್ಮಿಕ ಶಕ್ತಿಯಿರುತ್ತದೆ. ಅವರು ತಮ್ಮ ಕೇವಲ ಅವತರಣ ಮತ್ತು ಸನ್ನಿಧಿ ಮಾತ್ರದಿಂದಲೇ ಪ್ರಪಂಚದ ನೈತಿಕ ಸ್ಥಿತಿಯನ್ನೇ ಬದಲಾಯಿಸಿ ಧರ್ಮವಾಹಿನಿಯು ಅಧರ್ಮಕ್ಕಿಂತ ಹೆಚ್ಚು ಶಕ್ತಿಯುತವಾಗಿ ಹರಿಯುವಂತೆ ಮಾಡಬಲ್ಲರು. ಈ ಕ್ರಿಯೆಯನ್ನೇ ಗೀತೆಯಲ್ಲಿ ದಿವ್ಯಯೋಗ ಅಥವಾ ಐಶ್ವರಯೋಗ ಎಂದು ಕರೆದಿರುವುದು. ಶ್ರೀಕೃಷ್ಣನು ಅರ್ಜುನನಿಗೆ ಮತ್ತೆ ಮತ್ತೆ ಹೇಳುತ್ತಾನೆ, 'ನನ್ನ ದಿವ್ಯಯೋಗವನ್ನು ನೋಡು' ಎಂದು.

**ಹಲವು ಶತಮಾನಗಳಿಂದ ಪರಂಪರಾನುಗತವಾಗಿ ಬಂದಿದ್ದ ವಿವಿಧ ಆಧ್ಯಾತ್ಮಿಕ ಸಂಪ್ರದಾಯಗಳನ್ನು ಶ್ರೀರಾಮಕೃಷ್ಣರು ಪುನಶ್ಚೇತನಗೊಳಿಸಿದರು.**

ಸನಾತನ ಸಂಪ್ರದಾಯಗಳಿಗೆ ಜೀವಕಳೆ ತುಂಬಿ ಕಾಲಾಂತರದಲ್ಲಿ ಮರೆತುಹೋದ ಧರ್ಮಮಾರ್ಗಗಳನ್ನು ಮತ್ತೆ ಬೆಳಕಿಗೆ ತರುವುದರ ಮೂಲಕವೂ ಅವತಾರ ಪುರುಷರು ಧರ್ಮಸಂಸ್ಥಾಪನೆ ಮಾಡುತ್ತಾರೆ. ವೇದ, ವೇದಾಂತ, ಪುರಾಣ ಮತ್ತು ತಂತ್ರಗಳಲ್ಲಿದ್ದ, ಹಲವು ಶತಮಾನಗಳಿಂದ ಪರಂಪರಾನುಗತವಾಗಿ ಬಂದಿದ್ದ ವಿವಿಧ ಆಧ್ಯಾತ್ಮಿಕ ಸಂಪ್ರದಾಯಗಳನ್ನು ಶ್ರೀರಾಮಕೃಷ್ಣರು ಪುನಶ್ಚೇತನಗೊಳಿಸಿದರು. ಇಲ್ಲಿ ನಾವು ಗಮನಿಸಬೇಕಾದ ಮುಖ್ಯಾಂಶವೇನೆಂದರೆ ಕೇವಲ ಉಪದೇಶದ ಮೂಲಕವಲ್ಲದೆ ಅವುಗಳಂತೆ ಬಾಳುವುದರ ಮೂಲಕ ಅವರು ಹಳೆಯ ಸಂಪ್ರದಾಯಗಳನ್ನು ಪುನಶ್ಚೇತನಗೊಳಿಸಿದರು.

**ವೈದಿಕ ಧರ್ಮದ ಪುನರುಜ್ಜೀವನ** ಶ್ರೀರಾಮಕೃಷ್ಣರು ಪುನಶ್ಚೇತನಗೊಳಿಸಿದ ವೈದಿಕ ಧರ್ಮದ ಅತ್ಯಂತ ಮುಖ್ಯ ಅಂಶವೆಂದರೆ ಅತೀತ ಚೈತನ್ಯತತ್ತ್ವದ ಪ್ರತ್ಯಕ್ಷಾನುಭವ. ಸಾಮಾನ್ಯ ಭಾಷೆಯಲ್ಲಿ ಈ ಆದರ್ಶವನ್ನು ದೇವರ ಸಾಕ್ಷಾತ್ಕಾರ ಎಂದು ಕರೆಯುತ್ತೇವೆ. ಈ ಆದರ್ಶವು ಒಂದಲ್ಲ ಒಂದು ರೂಪದಲ್ಲಿ ಪ್ರಪಂಚದ ಎಲ್ಲ ಧರ್ಮಗಳಲ್ಲಿಯೂ ಇದೆ. ಆದರೆ ವೈದಿಕ ಧರ್ಮದಲ್ಲಿ ಇದು ಜನಸಾಮಾನ್ಯರ ಆದರ್ಶವಾಗಿ ಕೇಂದ್ರಸ್ಥಾನವನ್ನು ಪಡೆದಿರುತ್ತದೆ.

ವಿಜ್ಞಾನ, ವೈಚಾರಿಕತೆ, ಸಾಮಾಜಿಕ ಮತ್ತು ರಾಜಕೀಯ ಭಾವನೆಗಳು ಹಾಗೂ ಇತರ ಲೌಕಿಕ ಶಕ್ತಿಗಳ ಪ್ರಭಾವದಿಂದ ಈ ಮೇಲಿನ ಆದರ್ಶಕ್ಕೆ ಗ್ರಹಣ ಹಿಡಿದಂತಾಗಿದೆ. ಈ ಆದರ್ಶದ ಉಪೇಕ್ಷೆ ಆಧುನಿಕ ಯುಗದ ಮುಖ್ಯ ಲಕ್ಷಣವಾಗಿದೆ. ಶ್ರೀರಾಮಕೃಷ್ಣರು ಆಧ್ಯಾತ್ಮಿಕ ಆದರ್ಶದ ಪಾರಮ್ಯವನ್ನು ಪುನಃ ಪ್ರತಿಷ್ಠಾಪಿಸಿದರು. ಭಗವತ್ ಸಾಕ್ಷಾತ್ಕಾರವನ್ನು ಮನುಷ್ಯಜೀವನದ ಪರಮಾದರ್ಶವನ್ನಾಗಿ ಮಾಡಿದರು. 'ಈಶ್ವರನನ್ನು ಪಡೆಯುವುದೇ ಮನುಷ್ಯ ಜೀವನದ ಉದ್ದೇಶ'—ಇದನ್ನು ಶ್ರೀರಾಮಕೃಷ್ಣರು ಮತ್ತೆ ಮತ್ತೆ ಒತ್ತಿ ಹೇಳುತ್ತಿದ್ದರು.

**ಶ್ರೀರಾಮಕೃಷ್ಣರು ಆಧ್ಯಾತ್ಮಿಕ ಆದರ್ಶದ ಪಾರಮ್ಯವನ್ನು ಪುನಃ ಪ್ರತಿಷ್ಠಾಪಿಸಿದರು, ಭಗವತ್ ಸಾಕ್ಷಾತ್ಕಾರವನ್ನು ಮನುಷ್ಯಜೀವನದ ಪರಮಾದರ್ಶವನ್ನಾಗಿ ಮಾಡಿದರು.**

**ಭಗವತ್ ಶ್ರದ್ಧೆ :** ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಆದರ್ಶದ ಪುನಃಪ್ರತಿಷ್ಠಾಪನೆಯು ಆಧುನಿಕರ ಮನಸ್ಸಿನ ಮೇಲೆ ಗಮನಾರ್ಹ ಪ್ರಭಾವವನ್ನು ಬೀರಿರುತ್ತದೆ. ಈ ಪ್ರಭಾವದ ಮುಖ್ಯಾಂಶವೆಂದರೆ ಶ್ರದ್ಧೆಯ ಪುನರುತ್ಥಾನ. ಸಾವಿರಾರು ಜನರು ಶ್ರೀರಾಮಕೃಷ್ಣರ ಜೀವನ ಸ್ಫೂರ್ತಿಯಿಂದ ಭಗವತ್ ಶ್ರದ್ಧೆಯನ್ನು ಮತ್ತೆ ಪಡೆದುಕೊಂಡಿರುವರು. ಕ್ರೈಸ್ತ, ಯಹೂದಿ, ಇಸ್ಲಾಂ ಮುಂತಾದ ಇತರ ಧರ್ಮದವರೂ ಕೂಡ ಶ್ರೀರಾಮಕೃಷ್ಣರ ಜೀವನ ಉಪದೇಶಗಳನ್ನು ಓದಿ ತಮ್ಮ ತಮ್ಮ ಧರ್ಮದಲ್ಲಿ ಮತ್ತೆ ಶ್ರದ್ಧೆಯನ್ನು ಪಡೆದಿರುವರು.

**ಜೀವನದ ಅರ್ಥ :** ಭಗವತ್ ಶ್ರದ್ಧೆಯ ಕೊರತೆಯೊಂದೇ ಆಧುನಿಕ ಮಾನವನ ಸಮಸ್ಯೆಯಲ್ಲ. ಇದಕ್ಕಿಂತಲೂ ಗಂಭೀರವಾದ ಒಂದು ಸಮಸ್ಯೆಯೆಂದರೆ ಮನುಷ್ಯ ಜೀವನಕ್ಕೆ ಒಂದು ಉನ್ನತವಾದ ಉದ್ದೇಶವಿದೆ, ಒಂದು ಅರ್ಥವಿದೆ ಎಂಬ ಶ್ರದ್ಧೆಯನ್ನೇ ಕಳೆದುಕೊಂಡಿರುವುದು. ಸಾವಿರಾರು ಜನರು ಜೀವನಕ್ಕೆ ಯಾವ ಅರ್ಥವನ್ನೂ ಕಾಣದವರಾಗಿದ್ದಾರೆ. ಇಂದ್ರಿಯಸುಖ ಮತ್ತು ಬೌದ್ಧಿಕ ಆನಂದವೂ ಕೂಡ, ಪೂರ್ಣ ಸಂತೃಪ್ತಿಯನ್ನಾಗಲಿ ಶಾಂತಿಯನ್ನಾಗಲಿ ನೀಡುವುದಿಲ್ಲ ಎಂಬುದನ್ನು ಅವರು ಕಂಡುಕೊಂಡಿರುವರು. ಒಂದು ಉನ್ನತ ಗುರಿಯನ್ನಿಟ್ಟುಕೊಂಡು ಅದಕ್ಕಾಗಿ ಪ್ರಯತ್ನಪಡುತ್ತಿದ್ದರೆ ಆಗ ಜೀವನ ಅರ್ಥಪೂರ್ಣವಾಗುತ್ತದೆ. ಶ್ರೀರಾಮಕೃಷ್ಣರು ಸತ್ಯ ಸಾಕ್ಷಾತ್ಕಾರದ ಆದರ್ಶವನ್ನು ಪ್ರತಿಪಾದಿಸಿ ಮಾನವನಿಗೆ ಒಂದು ಉನ್ನತ ಗುರಿಯನ್ನು ನೀಡಿದರು ಮತ್ತು ಅನಿವಾರ್ಯವಾದ ಶೋಕ ತಾಪಸಂಕಟಗಳಿಂದ ಕೂಡಿದ ಜೀವನ ಹೋರಾಟವು ಅರ್ಥಪೂರ್ಣವಾಗುವಂತೆ ಮಾಡಿದರು.

**ಶಾಸ್ತ್ರದ ಗೌಣತ್ವ :** ಆಧ್ಯಾತ್ಮಿಕ ಪ್ರತ್ಯಕ್ಷಾನುಭವದ ಆದರ್ಶವು ಇನ್ನೊಂದು ರೀತಿಯಲ್ಲಿ ತನ್ನ ಪ್ರಭಾವವನ್ನು ಬೀರಿತು: ಅದು ಮಾನವನ ಮನಸ್ಸನ್ನು ಶಾಸ್ತ್ರ ಬಂಧನದಿಂದ ಬಿಡಿಸಿತು. ಯುವಕ ನರೇಂದ್ರನಾಥನು (ಸ್ವಾಮಿ ವಿವೇಕಾನಂದರು) ಶ್ರೀರಾಮಕೃಷ್ಣರನ್ನು 'ನೀವು ದೇವರನ್ನು ನೋಡಿರುವಿರಾ?' ಎಂದು ಕೇಳಿದಾಗ ಅವರು ಉತ್ತರಿಸಿದರು : 'ಹೌದು, ನಾನು ನಿನ್ನನ್ನು ನೋಡುತ್ತಿರುವಂತೆ ಅವನನ್ನು ನೋಡುತ್ತಿರುವೆನು—ಆದರೆ ಇನ್ನೂ ಹೆಚ್ಚು ಸ್ಪಷ್ಟವಾಗಿ.' ಈ ದಿಟ್ಟ ಉತ್ತರದಿಂದ ಶ್ರೀರಾಮಕೃಷ್ಣರು ಮಾನವ ಮನಸ್ಸನ್ನು ಶಾಸ್ತ್ರಗಳ ಮಿತಿಯಿಂದಲೂ ಮತ್ತು ವೈಚಾರಿಕತೆಯ ಮಿತಿಯಿಂದಲೂ ಮುಕ್ತಗೊಳಿಸಿದರು. ಪ್ರಪಂಚದ ಧಾರ್ಮಿಕ ಆಚಾರ್ಯರುಗಳೆಲ್ಲರೂ ತಮ್ಮ ತಮ್ಮ ಶಾಸ್ತ್ರಗಳೇ ಏಕೈಕ ಪ್ರಮಾಣವೆಂದು ಪ್ರತಿಪಾದಿಸಿದ್ದಾರೆ. ಶಂಕರ, ರಾಮಾನುಜ, ಮಧ್ವ ಮುಂತಾದ ಹಿಂದೂ ಆಚಾರ್ಯರೂ ಕೂಡ, ಆತ್ಮ ಪರಮಾತ್ಮರ ನೈಜಸ್ವರೂಪವನ್ನು ಶಾಸ್ತ್ರಗಳಿಂದ ಮಾತ್ರ ತಿಳಿಯಬಹುದು ಎಂದು ಹೇಳಿರುವರು. ಶ್ರೀರಾಮಕೃಷ್ಣರು ಶಾಸ್ತ್ರಗಳ ಪ್ರಾಮಾಣ್ಯವನ್ನು ಅಲ್ಲಗಳೆಯಲಿಲ್ಲ. ಆದರೆ ಅವರ ಪ್ರಕಾರ ಶಾಸ್ತ್ರಗಳು ಕೇವಲ ಬೌದ್ಧಿಕ ಜ್ಞಾನವನ್ನು ಕೊಡಬಲ್ಲವೇ ಹೊರತು ಅನುಭಾವಿಕ ಜ್ಞಾನವನ್ನು ನೀಡಲಾರವು—ಪಂಚಾಂಗವು ಮಳೆ ಎಷ್ಟು ಬರುತ್ತದೆ ಎಂದು ಹೇಳಬಲ್ಲುದೆ ಹೊರತು ಅದನ್ನು ಹಿಂಡಿದರೆ ಒಂದು ತೊಟ್ಟು ನೀರೂ ಸಿಗುವುದಿಲ್ಲ.

**ಗೃಹಸ್ಥರು ಋಷಿ ಆದರ್ಶವನ್ನು ಸ್ವೀಕರಿಸುವುದರ ಮೂಲಕ ತಮ್ಮ ಸ್ಥಾನದ ಘನತೆ ಮತ್ತು ಪಾವಿತ್ರ್ಯವನ್ನು ಉಳಿಸಿಕೊಳ್ಳಬಹುದು ಎಂಬುದನ್ನು ಶ್ರೀರಾಮಕೃಷ್ಣರು ತೋರಿಸಿದರು.**

**ಋಷಿ-ಆದರ್ಶ:** ಶ್ರೀರಾಮಕೃಷ್ಣರು ಪುನರುಜ್ಜೀವನಗೊಳಿಸಿದ ವೈದಿಕ ಧರ್ಮದ ಇನ್ನೊಂದು ಅಂಶವಾವುದೆಂದರೆ ಋಷಿ-ಆದರ್ಶ: ವೇದ ಮತ್ತು ಉಪನಿಷತ್ತುಗಳಲ್ಲಿ ಬರುವ ಸಂತರು ಋಷಿಗಳಾಗಿದ್ದರು. ಅವರು ಮದುವೆ ಮಾಡಿಕೊಂಡು ಅರಣ್ಯಾಶ್ರಮಗಳಲ್ಲಿ ಆತ್ಮ-ಸಂಯಮದ ಜೀವನವನ್ನು ನಡೆಸುತ್ತಿದ್ದರು. ಬುದ್ಧನಿಗೆ ಮುಂಚೆ ಸಂನ್ಯಾಸಾಶ್ರಮವು ಇತ್ತೆ ಎಂಬುದು ನಿರ್ದಿಷ್ಟವಾಗಿ ತಿಳಿಯದು. ಬಹುಸಂಖ್ಯೆಯಲ್ಲಿ ಜನರು ಸಂನ್ಯಾಸಾಶ್ರಮವನ್ನು ಸ್ವೀಕರಿಸುವ ಪದ್ಧತಿ ಬುದ್ಧನ ನಂತರವೇ ಬಂದುದು ಎಂಬುದಂತೂ ಸ್ಪಷ್ಟವಾಗಿ ತಿಳಿದ ವಿಷಯ. ಇದರಿಂದಾಗಿ ಕ್ರಮೇಣ ಋಷಿ-ಆದರ್ಶವು ಮರೆಯಲ್ಪಟ್ಟಿತು. ಶ್ರೀರಾಮಕೃಷ್ಣರು ಈ ಆದರ್ಶವನ್ನು ಅದರಂತೆ ಬಾಳುವುದರ ಮೂಲಕ ಪುನಶ್ಚೇತನಗೊಳಿಸಿದರು. ಅವರು ಇಷ್ಟಪಟ್ಟಿದ್ದರೆ ಮದುವೆಯಾಗದೆ ಇರಬಹುದಿತ್ತು. ಆದರೆ ಅವರು ಮದುವೆಯಾಗಲು ನಿರಾಕರಿಸದೆ ಇದ್ದುದು ಮಾತ್ರವಲ್ಲದೆ ತಮ್ಮ ವಧುವನ್ನು ತಾವೇ ಆರಿಸಿಕೊಂಡರು. ಇದು ಗೃಹಸ್ಥರ ಮುಂದೆ ಒಂದು ಹೊಸ ಆದರ್ಶವನ್ನು ಇಡಬೇಕೆಂಬುದು ಅವರ ಇಚ್ಛೆಯಾಗಿತ್ತು ಎಂಬುದನ್ನು ತೋರಿಸುತ್ತದೆ. ಆಶ್ರಮಗಳ ಸಂಪರ್ಕವಿರುವ ಗೃಹೀಭಕ್ತರು ಸಾಮಾನ್ಯವಾಗಿ, ಸಂನ್ಯಾಸವೊಂದೇ ಆದರ್ಶ ಮತ್ತು ತಾವು ಸಂನ್ಯಾಸ ಸ್ವೀಕರಿಸಲು ವಿಫಲರಾದೆವೆಂದು

ಭಾವಿಸುತ್ತಾರೆ. ಆದರೆ ಗೃಹಸ್ಥರು ಋಷಿ-ಆದರ್ಶವನ್ನು ಸ್ವೀಕರಿಸುವುದರ ಮೂಲಕ ತಮ್ಮ ಸ್ಥಾನದ ಘನತೆ ಮತ್ತು ಪಾವಿತ್ರ್ಯವನ್ನು ಉಳಿಸಿಕೊಳ್ಳಬಹುದು ಎಂಬುದನ್ನು ಶ್ರೀರಾಮಕೃಷ್ಣರು ತೋರಿಸಿದರು. ಆಧುನಿಕ ಕಾಲದಲ್ಲಿಯೂ, ದೊಡ್ಡ ದೊಡ್ಡ ನಗರಗಳಲ್ಲಿಯೂ ಕೂಡ, ಸನಾತನ ಋಷಿಗಳ ಜೀವನವನ್ನು ನಡೆಸಬಹುದು ಎಂಬುದನ್ನು ಅವರು ತೋರಿಸಿದರು. ಮುಂಬರುವ ಶತಮಾನಗಳಲ್ಲಿ ಇದೇ ಜೀವನದ ಪ್ರಧಾನ ಮಾರ್ಗವಾಗುತ್ತದೆಂಬುದಕ್ಕೆ ಅನೇಕ ಸೂಚನೆಗಳಿವೆ.

ಅಸ್ತಿತ್ವದ ಆನಂದ : ಶ್ರೀರಾಮಕೃಷ್ಣರು ಪುನಶ್ಚೇತನಗೊಳಿಸಿದ ವೈದಿಕ ಜೀವನದ ಮೂರನೆಯ ಅಂಶವಾವುದೆಂದರೆ ಅಸ್ತಿತ್ವದ ಆನಂದ —ಅಂದರೆ ಈ ಬದುಕಿನಲ್ಲಿಯೇ ಆನಂದವನ್ನು ಕಂಡುಕೊಳ್ಳುವುದು. ವೇದಗಳಲ್ಲಿ ಎದ್ದುಕಾಣುವ ಒಂದು ವೈಶಿಷ್ಟ್ಯವೆಂದರೆ ಆನಂದ. ಉಪನಿಷತ್ ಋಷಿಗಳು ಜೀವನದ ಮೂಲಭೂತ ಅಂಶ ಆನಂದವೆಂದು ಗುರುತಿಸಿದರು. ಉಪನಿಷತ್ತುಗಳಲ್ಲಿ ದುಃಖದ ವಿಚಾರವೇ ಇಲ್ಲವೆನ್ನಬಹುದು. ದುಃಖ ಮತ್ತು ಅಜ್ಞಾನಗಳನ್ನು ತಾತ್ತ್ವಿಕ ಭಾವನೆಗಳಾಗಿ ಭಾರತೀಯ ವಿಚಾರಧಾರೆಗೆ ಪರಿಚಯ ಮಾಡಿಸಿರುವುದು ಬೌದ್ಧಧರ್ಮ. ಅಲ್ಲಿಂದ ಮುಂದೆ ಭಾರತೀಯ ಮನಸ್ಸು ಜೀವನದ ನಿಷೇಧಾತ್ಮಕ ಅಂಶಗಳಲ್ಲಿಯೆ ಹೆಚ್ಚು ಹೆಚ್ಚು ಮಗ್ನವಾಗತೊಡಗಿತು. ಉಪನಿಷತ್ ಋಷಿಗಳು ಎಲ್ಲೆಲ್ಲಿಯೂ ಬ್ರಹ್ಮಜ್ಯೋತಿ ಬೆಳಗುತ್ತಿರುವುದನ್ನು ಕಂಡರು, ಎಲ್ಲೆಲ್ಲಿಯೂ ಬ್ರಹ್ಮಾನಂದವು ತುಂಬಿ ತುಳುಕುತ್ತಿರುವುದನ್ನು ನೋಡಿದರು. ಈ ಅದ್ಭುತ ವೈದಿಕದರ್ಶನವನ್ನು ಶ್ರೀರಾಮಕೃಷ್ಣರು ತಮ್ಮ ಜೀವನದ ಮೂಲಕ ಆಧುನಿಕ ಮಾನವನಿಗೆ ತೋರಿಸಿಕೊಟ್ಟರು. ಜೀವನದ ಬಗ್ಗೆ ಒಂದು ಸಕಾರಾತ್ಮಕ ಆನಂದಪೂರ್ಣ ಭಾವನೆಯನ್ನು ಬೆಳೆಸಿಕೊಳ್ಳಬೇಕೆಂದು ಅವರು ಯಾವಾಗಲೂ ಜನರನ್ನು ಹುರಿದುಂಬಿಸುತ್ತಿದ್ದರು. ಪಾಪಗಳ ಬಗ್ಗೆ ಮಾತನಾಡುತ್ತಾ ಹಿಂದಿನದನ್ನು ಮೆಲಕು ಹಾಕುತ್ತ ಇರುವುದನ್ನು ಅವರು ಎಂದೂ ಇಷ್ಟಪಡಲಿಲ್ಲ. ಒಮ್ಮೆ ಮಹಿಮಚರಣ ಚಕ್ರವರ್ತಿಯು ಶಂಕರಾಚಾರ್ಯರ ಪ್ರಸಿದ್ಧ ಸ್ತೋತ್ರವೊಂದನ್ನು ಹಾಡುತ್ತಿದ್ದನು. ಅದರಲ್ಲಿ ಸಂಸಾರ ಜೀವನವನ್ನು ದಹಿಸುತ್ತಿರುವ ದುಃಖದ ಮಡುವಿಗೆ ಹೋಲಿಸಲಾಗಿತ್ತು. ಆಗ ಶ್ರೀರಾಮಕೃಷ್ಣರು ಹೇಳಿದರು:

‘ಈ ಪ್ರಪಂಚವನ್ನು ಆಳ ಬಾವಿಯೆಂದಾಗಲೀ ಅಥವಾ ಘೋರಾರಣ್ಯವೆಂದಾಗಲಿ ಏಕೆ ಕರೆಯುತ್ತೀಯೆ? ಸಾಧಕನು ಭಗವಂತನನ್ನು ಗಟ್ಟಿಯಾಗಿ ಹಿಡಿದುಕೊಂಡರೆ ಪ್ರಪಂಚಕ್ಕೆ ಹೆದರುವುದೇತಕ್ಕೆ?.....’



‘ಅನಂತ ಆನಂದದ ವಿವಿಧ ಅನುಭವಗಳು ನಿನ್ನ ಜೀವನದಲ್ಲಿ ಒಂದುಗೂಡಿ ಒಂದು ಏಕತೆಯ ಮಂದಿರವಾಗಿ ರೂಪುಗೊಂಡುವು.’

*ರವೀಂದ್ರನಾಥ ಠಾಕೂರ್*

ಶ್ರೀರಾಮಕೃಷ್ಣರು ಯಾವಾಗಲೂ ದಿವ್ಯಾನಂದವನ್ನು ಪ್ರತಿಬಿಂಬಿಸುತ್ತಿದ್ದರು. ಶ್ರೀರಾಮಕೃಷ್ಣರ ವ್ಯಕ್ತಿತ್ವದ ಈ ಅಂಶವನ್ನು ರವೀಂದ್ರನಾಥ ಠಾಕೂರರು ಅವರ ಮೇಲೆ ರಚಿಸಿದ ತಮ್ಮ ಒಂದು ಕವನದಲ್ಲಿ ಅತಿ ಸುಂದರವಾಗಿ ಚಿತ್ರಿಸಿರುವರು. ಅವರು ಹೇಳುತ್ತಾರೆ: ‘ಅನಂತ ಆನಂದದ ವಿವಿಧ ಅನುಭವಗಳು ನಿನ್ನ ಜೀವನದಲ್ಲಿ ಒಂದುಗೂಡಿ ಒಂದು ಏಕತೆಯ ಮಂದಿರವಾಗಿ ರೂಪುಗೊಂಡುವು.’

ತಾಂತ್ರಿಕ ಸಂಪ್ರದಾಯದ ಪುನರುಜ್ಜೀವನ: ಆಧುನಿಕ ಮಾನವನಿಗಾಗಿ ಶ್ರೀರಾಮಕೃಷ್ಣರು ವೈದಿಕ ಧರ್ಮದ ಮೂರು ಅಂಶಗಳನ್ನು ಹೇಗೆ ಪುನಶ್ಚೇತನಗೊಳಿಸಿದರು ಎಂಬುದನ್ನು ಇದುವರೆಗೂ ಚರ್ಚಿಸಿದೆವು. ತಂತ್ರದ ಮುಖ್ಯಾಂಶಗಳನ್ನೂ ಅವರು ಪುನಶ್ಚೇತನಗೊಳಿಸಿದರು. ಶ್ರೀರಾಮಕೃಷ್ಣರು ಎಲ್ಲ ತಂತ್ರಸಾಧನೆಗಳನ್ನೂ ಅಭ್ಯಾಸ ಮಾಡಿ ಅವುಗಳ ತಾತ್ತ್ವಿಕ ಮತ್ತು ಆಧ್ಯಾತ್ಮಿಕ ಮೌಲ್ಯವನ್ನು ಪ್ರಮಾಣೀಕರಿಸಿದರು. ಅವರ ಮೂಲಕ ಬಂಗಾಳದ ಕೆಲವು ಅತ್ಯುತ್ತಮ ತಾಂತ್ರಿಕ ಸಾಧನಾ ಪರಂಪರೆ ನಮ್ಮ ಪಾಲಿಗೆ ದೊರೆಯುವಂತಾಯಿತು. ಸಮಗ್ರ ಮಂತ್ರಶಾಸ್ತ್ರ, ಪೂಜಾವಿಧಾನ, ಕುಂಡಲಿನೀ ಮತ್ತು ಷಟ್‌ಚಕ್ರ ವಿಚಾರ ಹಾಗೂ ಇತರ ತಂತ್ರಸಾಧನೆಯ ಅಂಶಗಳನ್ನು ಶ್ರೀರಾಮಕೃಷ್ಣರು ಪುನಶ್ಚೇತನಗೊಳಿಸಿದರು ಮತ್ತು ಅವನ್ನು ತಾವು ಪ್ರಾರಂಭಿಸಿದ ಹೊಸ ಸಂಪ್ರದಾಯದ ಅಂಗವನ್ನಾಗಿ ಮಾಡಿದರು.

ಆದರೆ ಶ್ರೀರಾಮಕೃಷ್ಣರು ಪುನಶ್ಚೇತನಗೊಳಿಸಿದ ಅತ್ಯಂತ ಮುಖ್ಯವಾದ ತಾಂತ್ರಿಕ ಸಂಪ್ರದಾಯದ ಅಂಶವೆಂದರೆ ಮಾತೃಭಾವದ ಹಿರಿಮೆ ಮತ್ತು ಗರಿಮೆ. ದಿವ್ಯ ಮತ್ತು ಮಾನವೀಯ—ಎರಡೂ ಮಾತೃಭಾವಗಳಿಗೆ ಅವರು ಜೀವಕಳೆ ತುಂಬಿದರು. ತಂತ್ರದ ಬಹು ಮುಖ್ಯ ಭಾವನೆಯೇ ಮಾತೃಭಾವ. ಭಗವಂತನನ್ನು ತಾಯಿಯೆಂದು ಪೂಜಿಸುವುದು ಭಾರತದಲ್ಲಿ, ವಿಶೇಷವಾಗಿ ಬಂಗಾಳದಲ್ಲಿ, ಬಹು ಕಾಲದಿಂದ ಬಂದ ಸಂಪ್ರದಾಯ. ಆದರೆ ಈ ಭಾವವನ್ನು ಅಷ್ಟು ತೀವ್ರವಾಗಿ, ವ್ಯಕ್ತಿತ್ವದ ಎಲ್ಲ ಅಂಶಗಳನ್ನೂ ಒಳಗೊಳ್ಳುವಂತೆ ಅಳವಡಿಸಿಕೊಳ್ಳಬಹುದೆಂಬುದು ಯಾರಿಗೂ ತಿಳಿದಿರಲಿಲ್ಲ. ಶ್ರೀರಾಮಕೃಷ್ಣರು ಇದನ್ನು ಮೊದಲಬಾರಿಗೆ ತಮ್ಮ ಜೀವನದಲ್ಲಿ ಪ್ರಾಯೋಗಿಕವಾಗಿ ತೋರಿಸಿಕೊಟ್ಟರು. ಮಗುವಿನಂತೆ ಜಗನ್ಮಾತೆಯನ್ನು ಸಂಪೂರ್ಣವಾಗಿ ಅವಲಂಬಿಸಿ ಹೇಗೆ ಈ ಪ್ರಪಂಚದಲ್ಲಿ ಜೀವಿಸಬಹುದು ಎಂಬುದನ್ನು ಅವರು ತೋರಿಸಿದರು. ಅವರು ಹೇಳುತ್ತಾರೆ: ‘ಮಾತೃಭಾವವೇ ಸಾಧನೆಯ ಕೊನೆಯ ಮಾತು. ಮಾತೃಭಾವ ಅತ್ಯಂತ ಶುದ್ಧಭಾವ.’

## ಪ್ರಾಪಂಚಿಕತೆ, ಇಂದ್ರಿಯ ಲೋಲುಪತೆ, ಭ್ರಷ್ಟಾಚಾರಗಳ ಕರಾಳರಾತ್ರಿಯಲ್ಲಿ ತೊಳಲುತ್ತಿರುವ ಪ್ರಪಂಚಕ್ಕೆ ಶ್ರೀರಾಮಕೃಷ್ಣರು ತಮ್ಮ ಪವಿತ್ರತೆಯ ಉಜ್ವಲ ಬೆಳಕನ್ನಿತ್ತರು, ಹೊಸ ನೈತಿಕ ಶಕ್ತಿಯ ಪ್ರವಾಹವನ್ನೇ ಹರಿಸಿದರು.

ಶ್ರೀರಾಮಕೃಷ್ಣರು ಮಾನವೀಯ ಮಾತೃತ್ವವನ್ನು ದಿವ್ಯ ಮಾತೃತ್ವದ ಪ್ರತಿನಿಧಿ ರೂಪವೆಂದು ಪರಿಗಣಿಸಿದರು. ಅವರು ಎಲ್ಲ ಸ್ತ್ರೀಯರನ್ನೂ ಜಗನ್ಮಾತೆಯ ಆವಿರ್ಭಾವವೆಂದು ಕಂಡರು. ಸ್ತ್ರೀಯರಿಗೆ ಘನತೆ ಗೌರವವನ್ನು ತೋರಿಸದ ಯಾವ ಸಮಾಜವೂ ಶ್ರೇಷ್ಠತೆಯನ್ನು ಮುಟ್ಟಲಾರದು. ಸ್ತ್ರೀಯ ವೈಶಿಷ್ಟ್ಯದ ತಳಹದಿಯೇ ಮಾತೃತ್ವ. ಸ್ತ್ರೀತ್ವವನ್ನು ಗೌರವಿಸುವ ಉತ್ತಮ ವಿಧಾನವೆಂದರೆ ಮಾತೃತ್ವವನ್ನು ಗೌರವಿಸುವುದು. ಇದನ್ನೇ ಶ್ರೀರಾಮಕೃಷ್ಣರು ತಮ್ಮ ಜೀವನದ ಮೂಲಕ ತೋರಿಸಿದರು.

**ಹೊಸ ಕೊಡುಗೆ** : ಅವತಾರ ಪುರುಷರು ಮೂರು ರೀತಿಯಲ್ಲಿ ಧರ್ಮಸ್ಥಾಪನೆ ಮಾಡುತ್ತಾರೆ ಎಂದು ಪ್ರಾರಂಭದಲ್ಲಿ ಹೇಳಿದ್ದಾಯಿತು. ಇವುಗಳಲ್ಲಿ ಎರಡನ್ನು ಆಗಲೇ ಚರ್ಚಿಸಿದ್ದಾಯಿತು. ಮೂರನೆಯದೇ ಹೊಸ ಪ್ರಣಾಳಿಕೆಯನ್ನು ತೆರೆಯುವುದು, ನವ ಸಂಪ್ರದಾಯವನ್ನು ಪ್ರಾರಂಭಿಸುವುದು. ಶ್ರೀರಾಮಕೃಷ್ಣರು ತೋರಿಸಿ ಕೊಟ್ಟ ಸಂಪ್ರದಾಯಗಳು, ಹೊಸ ಮಾರ್ಗಗಳು ಯಾವುವು?

ಮೊದಲನೆಯದಾಗಿ ಅವರೇ ಮತ್ತು ಅವರ ಅವತರಣವೇ ಒಂದು ಹೊಸ ಮಾರ್ಗ. ಅವರೇ ಭಗವದನುಗ್ರಹದ ಒಂದು ಹೊಸ ನಾಲೆಯಂತಿರುವರು. ಸ್ವಾಮಿ ವಿವೇಕಾನಂದರು ಹೇಳುವಂತೆ, ಶ್ರೀರಾಮಕೃಷ್ಣರ ಜನನದೊಂದಿಗೆ ಒಂದು ಹೊಸಯುಗವೇ ಪ್ರಾರಂಭವಾಯಿತು. ಅವರು ಸಾವಿರಾರು ಜನರ ಇಷ್ಟದೇವತೆಯಾಗಿರುವರು.

ಎರಡನೆಯದಾಗಿ ಶ್ರೀರಾಮಕೃಷ್ಣರು ನೈತಿಕ ಜೀವನಕ್ಕೆ ಅತ್ಯಂತ ಪ್ರಾಮುಖ್ಯವನ್ನು ನೀಡಿದರು. ಭಾರತೀಯ ಸಂಸ್ಕೃತಿಯಲ್ಲಿ ನೈತಿಕತೆ ಯಾವಾಗಲೂ ದುರ್ಬಲ ಸ್ಥಿತಿಯಲ್ಲಿತ್ತು. ಇದಕ್ಕೆ ಕಾರಣ, ಭಾರತೀಯ ಸಂಸ್ಕೃತಿಯು ಪಾರಮಾರ್ಥಿಕಾನುಭವದ ಆದರ್ಶಕ್ಕೇ ಅತ್ಯಂತ ಹೆಚ್ಚಿನ ಪ್ರಾಮುಖ್ಯವನ್ನು ನೀಡಿರುವುದು. ಇದು ನೈತಿಕ ಆದರ್ಶದ ಉಪೇಕ್ಷೆಗೆ ಕಾರಣವಾಯಿತು. ಬುದ್ಧನು ನೈತಿಕ ಆದರ್ಶವನ್ನು ಎತ್ತಿಹಿಡಿಯಲು ಪ್ರಯತ್ನಿಸಿದನು. ಆದರೆ ಅವನ ನಂತರ ಮತ್ತೆ ಅದು ಅವನತಿಗೊಂಡಿತು. ಈಗ ಶ್ರೀರಾಮಕೃಷ್ಣರು ಅದನ್ನು ಪುನಶ್ಚೇತನಗೊಳಿಸಿದರು. ಪ್ರಾಪಂಚಿಕತೆ, ಇಂದ್ರಿಯ ಲೋಲುಪತೆ, ಭ್ರಷ್ಟಾಚಾರಗಳ ಕರಾಳರಾತ್ರಿಯಲ್ಲಿ ತೊಳಲುತ್ತಿರುವ ಪ್ರಪಂಚಕ್ಕೆ ಶ್ರೀರಾಮಕೃಷ್ಣರು ತಮ್ಮ ಪವಿತ್ರತೆಯ ಉಜ್ವಲ ಬೆಳಕನ್ನಿತ್ತರು, ಹೊಸ ನೈತಿಕ ಶಕ್ತಿಯ ಪ್ರವಾಹವನ್ನೇ ಹರಿಸಿದರು.

ಆಧುನಿಕ ಪ್ರಪಂಚಕ್ಕೆ ಶ್ರೀರಾಮಕೃಷ್ಣರ ಮೂರನೆಯ ಕೊಡುಗೆ ಯಾವುದೆಂದರೆ ಒಂದು ಹೊಸ ಆಧ್ಯಾತ್ಮಿಕ ಸಮುದಾಯವನ್ನೇ ಸೃಷ್ಟಿಸಿದುದು. ಅವರ ಜೀವನದ ಕೊನೆಗಾಲದಲ್ಲಿ ಈ ಸಮುದಾಯದ ಕೇಂದ್ರವು ರೂಪುಗೊಂಡಿತು. ಇದು ಸರ್ವತ್ಯಾಗಿಗಳಾದ ಸಂನ್ಯಾಸೀ ಮತ್ತು ಅವರ ಗೃಹೀ ಭಕ್ತರಿಂದ ಕೂಡಿತ್ತು. ಈ ಕೇಂದ್ರವು ಈಗ ಒಂದು ವಿಶ್ವವ್ಯಾಪಿ ಸಂಘವಾಗಿ ಬೆಳೆದಿರುವುದು. ಯಾರನ್ನು ಅರ್ನಾಲ್ಡ್ ಟಾಯ್ನ್‌ಬಿ 'ರಚನಾತ್ಮಕ ಅಲ್ಪಸಂಖ್ಯಾತರು' (*creative minority*) ಎಂದು ಕರೆಯುತ್ತಾನೋ ಅವರಲ್ಲಿ ಪ್ರವಾದಿಯ ಶ್ರೇಷ್ಠ ಆದರ್ಶಗಳು ಮತ್ತು ಭಾವನೆಗಳು ಮೊದಲು ಅನುಷ್ಠಾನರೂಪಕ್ಕೆ ಬರುವುವು. ಈ ಅಲ್ಪ ಸಂಖ್ಯಾತರೇ ಕಾಲ ಕ್ರಮೇಣ ಒಂದು ಪ್ರಮುಖ ಸಮುದಾಯವಾಗಿ ಮಾರ್ಪಡುವರು. ರಾಮಕೃಷ್ಣ ಸಮುದಾಯದ ಅಥವಾ ಸಂಘದ ಒಂದು ವಿಶಿಷ್ಟ ಲಕ್ಷಣವೇನೆಂದರೆ ಜಾತಿ, ಮತ, ಜನಾಂಗ, ಸ್ವಾರ್ಥಗಳಿಲ್ಲದ ವಿಶಾಲ ಮನೋಭಾವದ ಬುದ್ಧಿಜೀವಿಗಳಿಂದ ಅದು ಕೂಡಿರುವುದು. ಬಹಳಷ್ಟು ಜನರು ಪರಿಶುದ್ಧ ಜೀವನವನ್ನು ನಡೆಸುತ್ತ ಉನ್ನತ ಆದರ್ಶಕ್ಕಾಗಿ ಹೋರಾಡುತ್ತಿದ್ದರೆ ಆಗ ಇಡೀ ಮಾನವಕೋಟಿಯ ಪ್ರಜ್ಞಾಸ್ತರವೇ ಉನ್ನತ ಮಟ್ಟಕ್ಕೆ ಏರುತ್ತದೆ.

ಆಧುನಿಕ ಜೀವನಕ್ಕೆ ಶ್ರೀರಾಮಕೃಷ್ಣರ ಇನ್ನೊಂದು ಕೊಡುಗೆ ಯಾವುದೆಂದರೆ ಮನುಷ್ಯನು ಮೂಲಭೂತವಾಗಿ ದಿವ್ಯಸ್ವರೂಪ ಮತ್ತು ಮನುಷ್ಯನಲ್ಲಿಯೇ ಭಗವಂತನನ್ನು ಪೂಜಿಸಬಹುದು ಎಂಬ ಅವರ ಅಭಿಪ್ರಾಯ. ಇದರ ಆಧಾರದ ಮೇಲೆಯೇ ಸ್ವಾಮಿ ವಿವೇಕಾನಂದರು **'ಶಿವಜ್ಞಾನೇ ಜೀವಸೇವಾ'** ಎಂಬ ಸಮಾಜ ಸೇವೆಯ ಒಂದು ಹೊಸ ತತ್ತ್ವವನ್ನೇ ರೂಪಿಸಿದರು. ಇದೊಂದು ಹೊಸಬಗೆಯ ಆಧ್ಯಾತ್ಮಿಕ ಮಾನವೀಯತೆ (*Spiritual Humanism*). ಇದು ಬಹುಜನ ಮನ್ನಣೆಯನ್ನು ಪಡೆದು ಕಾರ್ಯರೂಪಕ್ಕೆ ಬರುವುದಾದರೆ ಜನರ ಪರಸ್ಪರ ಸಂಬಂಧದಲ್ಲಿ ಒಂದು ಮಹಾಕ್ರಾಂತಿಯೆ ಉಂಟಾಗುತ್ತದೆ—ಪತಿ ಪತ್ನಿಯರ, ತಂದೆತಾಯಿ ಮತ್ತು ಮಕ್ಕಳ, ಅಧಿಕಾರಿ ಮತ್ತು ಅಧೀನರ ಸಂಬಂಧಗಳು ಉದಾತ್ತವೂ, ದಿವ್ಯವೂ, ಬಲಯುತವೂ, ಆಗುವುವು. (ಮುಂದುವರಿಯುತ್ತದೆ).

**ದೇವರು ಯಾವ ಕ್ಷಣದಲ್ಲಿ ಬೇಕಾದರೂ ಬರಬಹುದು. ಆದರೆ ಇದು ನಮ್ಮನ್ನು ಹೆದರಿಸಬೇಕಾಗಿಲ್ಲ. ರಾಜನು ತನ್ನ ಸೇವಕರ ಮನೆಗೆ ಭೇಟಿ ನೀಡುವ ಮುನ್ನವೇ ತನ್ನ ಆಳುಕಾಳುಗಳನ್ನು ಕಳುಹಿಸಿ ತನ್ನ ಸ್ವಾಗತಕ್ಕಾಗಿ ಎಲ್ಲವನ್ನೂ ಅಣಿಗೊಳಿಸುತ್ತಾನೆ. ಏಕೆಂದರೆ ಅವನಿಗೆ ಗೊತ್ತು ಸೇವಕನ ಮನೆಯಲ್ಲಿ ಏನೂ ಇಲ್ಲವೆಂದು. ಹಾಗೆಯೇ ದೇವರು ನಮ್ಮ ಹೃದಯಗುಡಿಯಲ್ಲಿ ಪ್ರತಿಷ್ಠಿತನಾಗುವ ಮುನ್ನ ಸೇವಕರನ್ನು ಕಳುಹಿಸುತ್ತಾನೆ. ಯಾರು ಈ ಸೇವಕರು ? ಪಾವಿತ್ರ್ಯ, ಪರಿಶುದ್ಧತೆ, ನಮ್ರತೆ, ಪ್ರೀತಿ, ದಯೆ. ಪೂರ್ವದಿಗಂತದಲ್ಲಿ ಮೂಡುವ ಹೊಂಬಣ್ಣದಿಂದಲೇ ಸೂರ್ಯೋದಯದ ಪರಿಚಯವಾಗುವಂತೆ ಆ ಮನುಷ್ಯನ ಮುಖವನ್ನು ನೋಡುತ್ತಲೇ, ದೇವರು ಆತನ ಬಳಿಗೆ ಬಹುಬೇಗನೆ ಬರುವನೆಂಬುದು ತಿಳಿಯುತ್ತದೆ.**

—ಶ್ರೀರಾಮಕೃಷ್ಣ